## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಮುಕ್ಕಣ್ಣ ಕರಿಗಾರ, ಹಿಂದಿನ ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ/3110/2012/ ಎಆರ್‌ಇ-6, ದಿನಾಂಕ:18.05.2016.

2. ಅಪರ ನಿಬಂಧಕರು-ವಿಚಾರಣೆಗಳು-6, ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಜಿಎಂ/3110/2012/ ಎಆರ್‌ಇ-6, ದಿನಾಂಕ: 18.05.2016.

****

**ಪ್ರಸ್ತಾವನೆ:**

ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ಜೋಯಿಡಾ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಅಖೇತಿ ಗ್ರಾಮ ಪಂಚಾಯತಿ ವತಿಯಿಂದ ವಿವಿಧ ವರ್ಷಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅಖೇತಿ ಗ್ರಾಮ ಪಂಚಾಯತಿಯ ವಿವಿಧ ಗ್ರಾಮಗಳಲ್ಲಿ, ನೆಲವನ್ನು ಸಮ ಮಾಡುವ ಹಾಗೂ ಆಸ್ಪತ್ರೆ ಮತ್ತು ಶಾಲೆಗಳಲ್ಲಿ ಸಸಿಗಳನ್ನು ನೆಡುವ ಕಾಮಗಾರಿಗಳಲ್ಲಿ, ಹಣದುರುಪಯೋಗವಾಗಿರುವ ಬಗ್ಗೆ, ಅಖೇತಿ ಗ್ರಾಮ ಪಂಚಾಯತಿಗೆ ಮಂಜೂರಾಗಿದ್ದ ಅನುದಾನದಲ್ಲಿ ಸದರಿ ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಸೇರಿದ ಜಮೀನಿನಲ್ಲಿ ಗೋಡೆಯನ್ನು ನಿರ್ಮಾಣ ಮಾಡಿರುವ ಬಗ್ಗೆ, 13ನೇ ಹಣಕಾಸು ಆಯೋಗದಲ್ಲಿ ಕಾಮಗಾರಿಗಳನ್ನು ನೆರವೇರಿಸದ್ದೆ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ

ಹಾಗೂ ಜಲನಿರ್ಮಲ ಯೋಜನೆಯಡಿಯಲ್ಲಿ ಹಣದುರುಪಯೋಗ ಮಾಡಿರುವ ಬಗ್ಗೆ ಆರೋಪಿಸಿ ಈ ಕೆಳಕಂಡ ಅಧಿಕಾರಿ/ಅಧಿಕಾರೇತರರ ವಿರುದ್ಧ ಜೋಯಿಡಾ ತಾಲ್ಲೂಕಿನ ನಿವಾಸಿಯಾದ ಶ್ರೀ ನಲ್ಸೇನ್ ಶವೇರಾ ಡಿ.ಲೀಮಾ, ಇವರು ದೂರನ್ನು ನೀಡಿರುತ್ತಾರೆ.

| ಕ್ರಂ.ಸಂ | ಅಧಿಕಾರಿಯ ಹೆಸರು | ಪದನಾಮ |
|---|---|---|
| 1. | ಶ್ರೀ ಇಡಾರ, | ಕಾರ್ಯದರ್ಶಿ, ಅಖೇತಿ ಗ್ರಾಮ ಪಂಚಾಯತಿ |
| 2. | ಲಂಬೋದರ ಗಾಂವಕರ, | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ |
| 3. | ಕೃಷ್ಣಾ ಗಾಂವಕರ್, | ಅಧ್ಯಕ್ಷರು, ಅಖೇತಿ ಗ್ರಾಮ ಪಂಚಾಯತಿ. |
| 4. | ಶ್ರೀ ಲಕ್ಷ್ಮೀ ಮಾರುತಿ ಚೋರೇಕರ್ | ಹಿಂದಿನ ಅಧ್ಯಕ್ಷರು, ಅಖೇತಿ ಗ್ರಾಮ ಪಂಚಾಯತಿ. |
| 5. | ಶ್ರೀ ನಾಗೇಶ್ ದೇಸಾಯಿ, | ಗುತ್ತಿಗೆದಾರರು, ಅಖೇತಿ ಗ್ರಾಮ ಪಂಚಾಯತಿ |
| 6. | ಶ್ರೀ ವಿಲಾಸ್ ಗಾವಕರ್, | ಸದಸ್ಯರು ಅಖೇತಿ ಗ್ರಾಮ ಪಂಚಾಯತಿ |

ಶ್ರೀ ನಲ್ಸೇನ್ ಶವೇರಾ ಡಿ.ಲೀಮಾ, ಇವರು ನೀಡಿದ್ದ ದೂರನ್ನು ದಾಖಲಿಸಿಕೊಂಡು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಾಲಂ 9 ರನ್ವಯ ತನಿಖೆಯನ್ನು ಕೈಗೆತ್ತಿಕೊಂಡು ಮೇಲೆ ತಿಳಿಸಿರುವ 6 ಆರೋಪಿತರ ಪೈಕಿ ಕ್ರಮ ಸಂಖ್ಯೆ: 5 ರಲ್ಲಿನ ವ್ಯಕ್ತಿಯನ್ನು ಹೊರತುಪಡಿಸಿ,(ಸರ್ಕಾರಿ ನೌಕರರಲ್ಲದ ಕಾರಣ) ಇನ್ನುಳಿದ 5 ಸರ್ಕಾರಿ ನೌಕರರು/ಅಧಿಕಾರೇತರರುಗಳಿಂದ ವಿವರಣೆಯನ್ನು ಪಡೆಯಲಾಗಿ, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿದ್ದ ಕಾರಣ, ದೂರಿನ ಬಗ್ಗೆ ವಿವರವಾದ ತನಿಖೆಯನ್ನು ನಡೆಸಲು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ, ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ದೂರನ್ನು ಉಲ್ಲೇಖಿಸಲಾಗಿದ್ದು, ಇದರನ್ವಯ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು-2 ರವರಾದ ಶ್ರೀ ಎಂ.ದೇವಿಪ್ರಸಾದ್, ಇವರಿಂದ ವಿಚಾರಣೆಯನ್ನು ನಡೆಸಿ ಪಡೆಯಲಾದ ತನಿಖಾ ವರದಿಯಲ್ಲಿ **ಈ ಕೆಳಕಂಡ ಲೋಪಗಳು ಕಂಡು ಬಂದಿರುತ್ತವೆ ಎಂದು ವರದಿಸಲಾಗಿರುತ್ತದೆ:-**

1. ವಿವಿಧ ವರ್ಷಗಳಲ್ಲಿ ನರೇಗಾ ಯೋಜನೆಯಡಿ ಕೈಗೊಳ್ಳಲಾಗಿರುವ ಹಲವಾರು ಗ್ರಾಮಗಳಲ್ಲಿನ ಸರ್ಕಾರಿ ಶಾಲೆಗಳಿಗೆ ಆವರಣ ಗೋಡೆ ನಿರ್ಮಿಸುವ ಹಾಗೂ ಶಾಲಾ ಮೈದಾನ ಸಮತಟ್ಟು

ಮಾಡುವ ಕೆಲಸಕ್ಕೆ ಸಸಿ ನೆಡುವ ಕಾಮಗಾರಿಯ ಹೆಸರಿನಲ್ಲಿ ಅಂದಾಜು ಮಂಜೂರು ಮಾಡಿಕೊಂಡು, ಶಾಲೆಯ ಕಂಪೌಂಡ್ ಗೋಡೆ ಹಾಗೂ ಮೈದಾನ ಸಮತಟ್ಟು ಮಾಡುವ ಕೆಲಸಗಳನ್ನು ನಿರ್ವಹಿಸಲಾಗಿದೆ. ಸಸಿ ನೆಡುವ ಕಾಮಗಾರಿಯ ಅನುದಾನವನ್ನು ಕಂಪೌಂಡ್ ಗೋಡೆ ನಿರ್ಮಾಣ ಹಾಗೂ ಮೈದಾನ ಸಮತಟ್ಟು ಮಾಡುವ ಕೆಲಸಕ್ಕೆ ಉಪಯೋಗಿಸಿಕೊಳ್ಳಲು, ಈ ರೀತಿ ಮಾಡಲಾಗಿದೆ. ಎಂದು ಭಾವಿಸಿದ್ದು, ಈ ರೀತಿ ಒಂದು ಕಾಮಗಾರಿಯ ಅನುದಾನವನ್ನು ಬೇರೆ ಕಾಮಗಾರಿಗಳಿಗೆ ಉಪಯೋಗಿಸಿರುವುದು ಕರ್ತವ್ಯ ನಿರ್ಲಕ್ಷ್ಯತೆಯಾಗಿದೆ. ಮಾಡಿಕೊಂಡಿರುವ ಶಾಲೆಯ ಅಂದಾಜುಗಳಲ್ಲಿ ಸಸಿ ನೆಡಲು ಅವಕಾಶವನ್ನೇ ಕಲ್ಪಿಸಿಕೊಂಡಿರುವುದಿಲ್ಲ. ಆದರೆ, ಅಂದಾಜಿಗೆ ಸಸಿ ನೆಡುವ ಹೆಸರನ್ನು ಸೇರಿಸಿಕೊಳ್ಳಲಾಗಿದೆ. ಈ ರೀತಿ ಮಾಡಿರುವುದು ದೂರುದಾರರ ಅನುಮಾನಕ್ಕೆ ಕಾರಣವಾಗಿದೆ.

2. ನರೇಗಾ ಯೋಜನೆಯಡಿ ನಿರ್ವಹಿಸಲಾಗಿರುವ ಬಾಂದಾರ, ಶಾಲಾ ಮೈದಾನ ಸಮತಟ್ಟು ಮಾಡುವ ಹಾಗೂ ಕಂಪೌಂಡ್ ಗೋಡೆ ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಯೋಜನೆಯ ಮಾರ್ಗಸೂಚಿಯನ್ವಯ 3 ಹಂತದ ಛಾಯಾಚಿತ್ರಗಳನ್ನು ದಾಖಲಿಸಿರುವುದು ಕಂಡು ಬಂದಿಲ್ಲ. ಕೆಲವು ಕಾಮಗಾರಿಗಳಿಗೆ ನಿರ್ವಹಣೆ ಹಂತದ ಛಾಯಾಚಿತ್ರಗಳನ್ನು ಒದಗಿಸಿದ್ದರೂ ಸಹ ಪೂರ್ಣ 3 ಹಂತದ ಛಾಯಾಚಿತ್ರಗಳನ್ನು ಪರಿಶೀಲನೆಗೆ ನಿಖರವಾಗಿ ಕೇಳಿದಾಗ್ಯೂ ಒದಗಿಸಿರುವುದಿಲ್ಲ.

3. ನರೇಗಾ ಯೋಜನೆಯಡಿ ಕೈಗೊಂಡಿರುವ ಶಾಲೆಯ ಮೈದಾನ ಸಮತಟ್ಟು ಮಾಡುವ, ಶಾಲೆಯ ಕಂಪೌಂಡ್ ಗೋಡೆ ನಿರ್ಮಾಣ, ಬಾಂದಾರಗಳ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದು ಶಾಲೆಗಳ ಉಪನ್ಯಾಸಕರ ಹಾಗೂ ಸ್ಥಳೀಯರ ಹೇಳಿಕೆಗಳಿಂದ ತಿಳಿದು ಬಂದಿರುತ್ತದೆ. ಕಾಮಗಾರಿಗಳು ಸುಸ್ಥಿತಿಯಲ್ಲಿರುವುದನ್ನು ಸ್ಥಳ ತನಿಖೆ ಸಮಯದಲ್ಲಿ ಗಮನಿಸಲಾಗಿರುತ್ತದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರು ನೀಡಿದ್ದ ತನಿಖಾ ವರದಿಯಲ್ಲಿ ಸದರಿ ಲೋಪಗಳಿಗೆ ಈ ಕೆಳಕಂಡ ಅಧಿಕಾರಿ/ನೌಕರರುಗಳು ಕಾರಣಕರ್ತರಾಗಿರುತ್ತಾರೆಂದು ಸಹ ವರದಿಸಲಾಗಿದೆ.

| ಕ್ರಂ.ಸಂ | ಅಧಿಕಾರಿಯ ಹೆಸರು | ಪದನಾಮ |
|---|---|---|
| 1. | ಶ್ರೀ ಜಡಾರ, | ಕಾರ್ಯದರ್ಶಿ, ಅರೇರಿ ಗ್ರಾಮ ಪಂಚಾಯತಿ |

| | | |
|---|---|---|
| 2. | ಲಂಬೋದರ ಗಾಂವಕರ. | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ |
| 3. | ಸಿ.ಜಿ.ಹಿರೇಮಠ, | ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಖೇತಿ ಗ್ರಾಮ ಪಂಚಾಯತಿ |
| 4. | ಬಿ.ಆರ್.ಶಿವಕುಮಾರ್, | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ |
| 5. | ಶ್ರೀ ಚಂದ್ರಪ್ಪ, ಜಿ. | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ |
| 6. | ಮುಕ್ಕಣ್ಣ ಕರಿಗಾರ | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ |
| 7. | ಶ್ರೀ ಎಸ್.ಕೆ.ನಾಯಕ್, | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ |
| 8. | ಶ್ರೀ ಬಿ.ಶಂಕ್ರಪ್ಪ, | ಸಹಾಯಕ ನಿರ್ದೇಶಕರು(ತಾಂ) ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ |
| 9. | ಚಂದ್ರಶೇಖರ್.ಮಾಳಗಾವಿ | ತಾಂತ್ರಿಕ ಸಮಾಲೋಚಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ |

ಸದರಿ 9 ಅಧಿಕಾರಿ/ನೌಕರರುಗಳ ಪೈಕಿ ಶ್ರೀ ಬಿ.ಆರ್.ಶಿವಕುಮಾರ್, ಶ್ರೀ ಚಂದ್ರಪ್ಪ.ಜಿ. ಮತ್ತು ಚಂದ್ರಶೇಖರ್ ಮಾಳಗಾವಿ. ಇವರುಗಳ ಸಮಾಲೋಚಕರುಗಳಾಗಿದ್ದು, ಸರ್ಕಾರಿ ನೌಕರರುಗಳಾಗಿಲ್ಲದೆ ಇರುವುದರಿಂದ. ಇವರನ್ನು ಹೊರತುಪಡಿಸಿ. ಇನ್ನುಳಿದ ಈ ಕೆಳಕಂಡ ಅಧಿಕಾರಿಗಳನ್ನು ಪ್ರತಿವಾದಿಗಳು 7-10 ಗಳೆಂದು ಗುರುತಿಸಿ, ವಿಚಾರಣಾ ವರದಿಯ ಬಗ್ಗೆ ವಿವರಣೆಯನ್ನು ಸಲ್ಲಿಸಲು ನೋಟಿಸುಗಳನ್ನು ಜಾರಿ ಮಾಡಲಾಗಿರುತ್ತದೆ ಎಂದು ವರದಿಸಲಾಗಿದೆ.

| ಕ್ರಂ.ಸಂ | ಅಧಿಕಾರಿಯ ಹೆಸರು | ಪದನಾಮ |
|---|---|---|
| 1. | ಸಿ.ಜಿ.ಹಿರೇಮಠ. | ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಚವೇತಿ ಗ್ರಾಮ ಪಂಚಾಯತಿ (7ನೇ ಪ್ರತಿವಾದಿ) |
| 2. | ಮುಕ್ಕಣ್ಣ ಕರಿಗಾರ | ಉಪಯೋಜನಾ ವ್ಯವಸ್ಥಾಪಕರು. ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ (8ನೇ ಪ್ರತಿವಾದಿ) |
| 3. | ಶ್ರೀ ಎಸ್.ಕೆ.ನಾಯಕ. | ಉಪಯೋಜನಾ ವ್ಯವಸ್ಥಾಪಕರು. ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ (9ನೇ ಪ್ರತಿವಾದಿ) |
| 4. | ಶ್ರೀ ಜಿ.ಶಂಕ್ರಪ್ಪ. | ಸಹಾಯಕ ನಿರ್ದೇಶಕರು(ಪಾಂ) ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ (10ನೇ ಪ್ರತಿವಾದಿ) |

ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟಿಸುಗಳಿಗೆ ಪ್ರತಿವಾದಿ-9 ಮತ್ತು 10 ಗಳು ಇವರುಗಳು ಮಾತ್ರ ಉತ್ತರವನ್ನು ಸಲ್ಲಿಸಿದ್ದು, ಉಳಿದವರು ಉತ್ತರವನ್ನು ನೀಡಿರುವುದಿಲ್ಲವೆಂದು ತಿಳಿಸುತ್ತಾ, ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ, ತಿನ್ನೈಘಾಟ್ ಗ್ರಾಮದ ಟಾರ್ ಕಾಮಗಾರಿಯಲ್ಲಿ, ಕಾಮಗಾರಿಗೆ ಸಂಬಂಧಿಸಿದಂತೆ, ಅಳತೆ ಪುಸ್ತಕದಲ್ಲಿ, ಹೆಚ್ಚುವರಿ ಅಳತೆಯನ್ನು ನಮೂದಿಸಿ, ರೂ.39,418/ಗಳನ್ನು ದುರುಪಯೋಗಪಡಿಸಿಕೊಂಡಿರುವುದು, ಹಾಗೂ ಸಿ.ಸಿ.ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ಹೆಚ್ಚುವರಿ ಅಳತೆಯನ್ನು ನಮೂದಿಸಿ ರೂ. 10.059/-ಗಳ ಆರ್ಥಿಕ ನಷ್ಟವನ್ನು ಉಂಟು ಮಾಡಿರುವುದು ಹಾಗೂ ಜಲನಿರ್ಮಲ ಯೋಜನೆಯಡಿ ತಿನ್ನೈಘಾಟ್ ಗ್ರಾಮಕ್ಕೆ ಪಂಪಿಂಗ್ ನೀರು ಸರಬರಾಜು ಯೋಜನೆಯಡಿ ಒದಗಿಸಲಾಗಿದ್ದ 3 Clorination units ಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇರುವುದರಿಂದ/ವಿಫಲರಾಗಿರುವುದರಿಂದ. ರೂ. 1.15.200/-ಗಳ ಸರ್ಕಾರದ ಹಣ ವ್ಯರ್ಥವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗುವುದರಿಂದ, ವಿಚಾರಣಾವರದಿಯನ್ನಾಧರಿಸಿ ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟಿಸಿಗೆ ಪ್ರತಿವಾದಿ 9 ಮತ್ತು 10 ಇವರುಗಳು ನೀಡಿದ್ದ ಉತ್ತರವು ಸಮಂಜಸವಾಗಿಲ್ಲದೆ ಇರುವುದರಿಂದ, ಹಾಗೂ ಆರೋಪಗಳನ್ನು ಕೈಬಿಡಲು ಸಮರ್ಥನೀಯವಾಗಿಲ್ಲದ

ಇರುವುದರಿಂದ, ಹಾಗೂ ಪ್ರತಿವಾದಿ 1,2,7ಮತ್ತು 8 ಇವರುಗಳು ಉತ್ತರವನ್ನು ನೀಡದೆ ಇರುವುದರಿಂದ, ಅವರ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ, ಸದರಿ ಅಧಿಕಾರಿಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(1)(i)(ii)(iii) ಗಳನ್ನು ಉಲ್ಲಂಘಿಸಿರುವುದರಿಂದ, ಪ್ರತಿವಾದಿ 1, 2, ಮತ್ತು 7-10 ಗಳಾದ ಈ ಕೆಳಕಂಡ 6 ಅಧಿಕಾರಿ/ನೌಕರರುಗಳ ವಿರುದ್ದ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957 ರನ್ವಯ ಇಲಾಖಾ ವಿಚಾರಣೆಯನ್ನು ಜರುಗಿಸಲು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಪ್ರಕರಣವನ್ನು ತಮಗೆ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತರು-I ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಶಿಫಾರಸು ಮಾಡಿರುತ್ತಾರೆ.

| ಕ್ರಂ.ಸಂ | ಅಧಿಕಾರಿಯ ಹೆಸರು | ಪದನಾಮ |
|---|---|---|
| 1. | ಶ್ರೀ ಜಪಾರ, | ಕಾರ್ಯದರ್ಶಿ, ಅವೇತಿ ಗ್ರಾಮ ಪಂಚಾಯತಿ (ಪ್ರತಿವಾದಿ-1) |
| 2. | ಶ್ರೀ ಲಂಬೋದರ ಗಾಂವಕರ, | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ (ಪ್ರತಿವಾದಿ-2) |
| 3. | ಶ್ರೀ ಸಿ.ಜಿ.ಹಿರೇಮಠ, | ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಖೇತಿ ಗ್ರಾಮ ಪಂಚಾಯತಿ (ಪ್ರತಿವಾದಿ-7) |
| 4. | ಶ್ರೀ ಮುಕ್ಕಣ್ಣ ಕರಿಗಾರ | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ (ಪ್ರತಿವಾದಿ-8) |
| 5. | ಶ್ರೀ ಎಸ್.ಕೆ.ನಾಯಕ್, | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ(ಪ್ರತಿವಾದಿ-9) |
| 6. | ಶ್ರೀ ಜಿ.ಶಂಕ್ರಪ್ಪ, | ಸಹಾಯಕ ನಿರ್ದೇಶಕರು(ತಾಂ) ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ(ಪ್ರತಿವಾದಿ-10) |

ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ನೀಡಿರುವ ವರದಿ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಕಾರ್ಯಪಾಲಕ ಅಭಿಯಂತರರು-2 ಇವರು ದಿನಾಂಕ: 27.03.2015 ರಂದು ನೀಡಿರುವ ತನಿಖಾ ವರದಿ/ಇತರೆ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಆರೋಪಿತ 6 ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ನಿಷ್ಠೆ ತೋರದೆ, ಹಣ ದುರುಪಯೋಗ/ಆರ್ಥಿಕ ನಷ್ಟಕ್ಕೆ ಕಾರಣಕರ್ತರಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ರೀತಿಯ ವರ್ತನೆಯು ಸರ್ಕಾರಿ ನೌಕರರಿಗೆ ತರವಲ್ಲದ ವರ್ತನೆಯಾಗಿರುವುದರಿಂದ, ಸದರಿ 6 ಅಧಿಕಾರಿ/ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು, ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತರು -1, ಇವರಿಗೆ ವಹಿಸಲು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 110 ವಿಸೇಬಿ 2016 ಬೆಂಗಳೂರು ದಿನಾಂಕ:20-06-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ಜೋಯಿಡಾ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಅಖೇತಿ ಗ್ರಾಮ ಪಂಚಾಯತಿ ವತಿಯಿಂದ 2010 ರಿಂದ 2011-12 ನೇ ಸಾಲುಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅಖೇತಿ ಗ್ರಾಮ ಪಂಚಾಯತಿಯ ವಿವಿಧ ಗ್ರಾಮಗಳಲ್ಲಿ, ಕೈಗೊಂಡ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಈ ಕೆಳಕಂಡ 6 ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| ಕ್ರಂ.ಸಂ | ಅಧಿಕಾರಿಯ ಹೆಸರು | ಪದನಾಮ |
|---|---|---|
| 1. | ಶ್ರೀ ಜಡಾರ, | ಕಾರ್ಯದರ್ಶಿ, ಅಖೇತಿ ಗ್ರಾಮ ಪಂಚಾಯತಿ (ಪ್ರತಿವಾದಿ-1) |
| 2. | ಶ್ರೀ ಲಂಬೋದರ ಗಾಂವಕರ, | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಖೇತಿ ಗ್ರಾಮ ಪಂಚಾಯತಿ (ಪ್ರತಿವಾದಿ-2) |

| | | |
|---|---|---|
| 3. | ಶ್ರೀ ಸಿ.ಜಿ.ಹಿರೇಮಠ, | ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಖೇತಿ ಗ್ರಾಮ ಪಂಚಾಯತಿ (ಪ್ರತಿವಾದಿ-7) |
| 4. | ಶ್ರೀ ಮುಕ್ಕಣ್ಣ ಕರಿಗಾರ | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ (ಪ್ರತಿವಾದಿ-8) |
| 5. | ಶ್ರೀ ಎಸ್.ಕೆ.ನಾಯಕ್, | ಉಪಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ(ಪ್ರತಿವಾದಿ-9) |
| 6. | ಶ್ರೀ ಜಿ.ಶಂಕ್ರಪ್ಪ, | ಸಹಾಯಕ ನಿರ್ದೇಶಕರು(ತಾಂ) ಜಲನಿರ್ಮಲ ಯೋಜನೆ ಜಿಲ್ಲಾ ನೆರವು ಘಟಕ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ(ಪ್ರತಿವಾದಿ-10) |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

20/6/2016
( ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ ಕಾಯಕ್ರಮ ಸಂಯೋಜನೆ ಮತ್ತು ಸಾಂಖ್ಯಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ ಕಾಯಕ್ರಮ ಸಂಯೋಜನೆ ಮತ್ತು ಸಾಂಖ್ಯಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಅಪರ ನಿಬಂಧಕರು ವಿಚಾರಣೆಗಳು-9 ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.
6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ
7) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ, ವಿಧಾನ ಸೌಧ ಬೆಂಗಳೂರು
8) ಸಂಬಂಧಿಸಿದ ಅಧಿಕಾರಿಗಳಿಗೆ.(ಮು.ಕಾ.ನಿ.ಅ.ಜಿಪಂ. ಚಿತ್ರದುರ್ಗ, ಇವರ ಮುಖಾಂತರ)

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು

2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ–2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

3) ಮೇಲ್ವಿಚಾರಕರು. ಗಣಕ ಕೋಶ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.